ಓ ಎಸ್ ನಂ. 41/2016

ಡಿ ಡಬ್ಲ್ಯು 1

ದಿನಾಂಕ 25-01-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ವಾದಿಗಳ ಪರಃ ಶ್ರೀ ಡಿ ಸಿ ವಕೀಲರಿಂದಃ</u>

ನನ್ನ ತಂದೆ ಎಲ್ ಸಿ ರವೀಂದ್ರರವರಿಗೆ ನಾನೊಬ್ಬನೇ ಮಗ ಎಂದರೆ ಸರಿ. ನನ್ನನ್ನು ಹೊರತು ಪಡಿಸಿ ನನ್ನ ತಂದೆಗೆ ಬೇರೆ ಮಕ್ಕಳು ಯಾರು ಇರುವುದಿಲ್ಲ. ದಿನಾಂಕ 30/08/2013 ರಂದು ನಾನು ಒಂದು ನೊಂದಾಯಿತ ಕರಾರು ಪತ್ರವನ್ನು ಕಿರಣ್ ಮತ್ತು ಚಂದ್ರಶೇಖರ್ ರವರಿಗೆ ಬರೆದುಕೊಟ್ಟಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಮೇಲ್ಕಂಡ ಕರಾರು ಪತ್ರದ ದೃಡೀಕೃತ ನಕಲನ್ನು ತೋರಿಸಿ ಕೇಳಲಾಗಿ ಸಾಕ್ಷಿ ಆ ದಾಖಲೆಯನ್ನು ಒಪ್ಪಿರುತ್ತಾರೆ. ಸದರಿ ದಾಖಲೆಯನ್ನು ನಿಪಿ-9 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ನಾನು ಕುಡಿತದ ಚಟಕ್ಕೆ ಒಳಗಾಗಿದ್ದೆ, ಅವರು ನನ್ನನ್ನು ಒಪ್ಪಂದ ಕರಾರಿಗೆ ಸಾಕ್ಷಿದಾರನಾಗಿ ಸಹಿ ಮಾಡಲು ಕರೆದುಕೊಂಡು ಹೋಗಿ ಆ ದಾಖಲೆ ಮಾಡಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನನಗೆ ಮೋಸ ಮಾಡಿ ಮೇಲ್ಕಂಡ ದಾಖಲೆಯನ್ನು ಮಾಡಿಕೊಂಡಿರುವ ಬಗ್ಗೆ ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ನಿಪಿ-9 ರ ಸದರಿ ದಾಖಲೆಯ ಎಲ್ಲಾ ಪುಟಗಳಲ್ಲೂ ಇರುವ ಸಹಿಗಳು ನನ್ನದೇ

ಆಗಿರುತ್ತದೆ ಎಂದು ಸಾಕ್ಷಿ ಗುರುತಿಸಿರುತ್ತಾರೆ. ನಿಪಿ-9 ರ ಒಪ್ಪಂದದ ಕರಾರು ಕ್ರಯಪತ್ರದ ಎರಡನೇ ಪುಟದಲ್ಲಿ "the vender is the obsolute owner of the residential converted property bearing Asst.No. 1977/1 1914/1 , measuring 356+320/2 feet x 172" ಎಂದು ನಮೂದು ಇರುತ್ತದೆ ಎಂದು ಸಾಕ್ಷಿ ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ನಿಪಿ-9 ರ ಒಪ್ಪಂದ ಕರಾರು ಪತ್ರವನ್ನು ಬರೆದುಕೊಟ್ಟಿದ್ದರೂ ಸಹ ಈ ದಿನ ನಾನು ಕುಡಿತದ ಚಟಕ್ಕೆ ಒಳಗಾಗಿದ್ದ ಸಮಯದಲ್ಲಿ ಆ ದಾಖಲೆಯನ್ನು ಮಾಡಿಸಿಕೊಂಡಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಕ್ರಯದ ಕರಾರು ಪತ್ರ ಬರೆದುಕೊಡುವ ಸಮಯದಲ್ಲಿ ಅದರಲ್ಲಿ ನಮೂದಿಸಿರುವ ಸ್ವತ್ತಿನ ಖಾತೆ ನನ್ನ ಹೆಸರಿನಲ್ಲಿ ಇರಲಿಲ್ಲ ಅಥವಾ ಅದಕ್ಕಿಂತ ಪೂರ್ವದಲ್ಲೂ ನನ್ನ ಹೆಸರಿನಲ್ಲಿ ಖಾತೆ ಇರಲಿಲ್ಲ ಎಂದರೆ ಸರಿ. ಸದರಿ ಕರಾರುಪತ್ರದ ಕಿರಣ್ ಮತ್ತು ಚಂದ್ರಶೇಖರ್ ರವರಿಗೂ ಸಹ ನಾನು ನನ್ನ ತಂದೆಗೆ ಒಬ್ಬನೇ ಮಗನಾಗಿದ್ದು ವಿಭಾಗದಲ್ಲಿ ಸ್ವತ್ತನ್ನು ಪಡೆದು ಕ್ರಯಪತ್ರವನ್ನು ಬರೆದುಕೊಡವುದಾಗಿ ಒಪ್ಪಂದ ಪತ್ರ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ಅವರ ಪಿತ್ರಾರ್ಜಿತ ಗಳಿಕೆಯಿಂದ ಸ್ವತ್ತಿನಲ್ಲಿ ದಾವಾ ಆಸ್ತಿಯನ್ನು ಖರೀದಿಸಿರುವುದರಿಂದ ನಾನು ಮಾಲೀಕನಾಗಿರುವುದರಿಂದಲೇ ಸದರಿ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ-9 ರ ಕರಾರುಪತ್ರದ ದಕ್ಷಿಣ ಭಾಗದಲ್ಲಿರುವ ದಾವಾ ಸ್ವತ್ತನ್ನು ನಾನು ದಿನಾಂಕ 10/07/2013 ರ ದಾಖಲೆಯಂತೆ ವಾದಿಗಳಿಗೆ ಒಪ್ಪಂದ ಕರಾರುಪತ್ರ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-9 ರಲ್ಲಿರುವ ನನ್ನ ಸಹಿಗಳಿಗೂ ಮತ್ತು ನಿಪಿ-1 ರಲ್ಲಿರುವ ಸಹಿಗಳಿಗೂ ಸಾಮ್ಯತೆ ಇದೆ ಎಂದರೆ ಸಾಕ್ಷಿ ನಿಪಿ-1 ರಲ್ಲಿರುವಂತಹ ಹೆಬ್ಬೆಟ್ಟಿನ ಗುರುತಾಗಲಿ ಸಹಿಯಾಗಲಿ ನನ್ನದಾಗಿರುವುದಿಲ್ಲ, ಅವುಗಳನ್ನು ಪೋರ್ಜರಿ ಮಾಡಲಾಗಿದೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನಿಪಿ-9 ರಲ್ಲಿರುವ ನನ್ನ ಸಹಿಗೂ ನಿಪಿ-1 ರಲ್ಲಿರುವ ನನ್ನದೆಂದು ಹೇಳಲಾಗುವ ಸಹಿಗೂ ವ್ಯತ್ಯಾಸ ಇದೆ ಎಂದು ನುಡಿಯುತ್ತಾರೆ.

ವಾದಿಗಳು ಪ್ರಸ್ತುತ ದಾವೆಯನ್ನು ಹೂಡುವ ಮೊದಲು ದಿನಾಂಕ 30/04/2016 ರಂದು ತಮ್ಮ ವಕೀಲರ ಮೂಲಕ ನನಗೆ ನೋಟೀಸು ನೀಡಿದ್ದರು ಎಂದರೆ ಸರಿ. ನಾನು ದಿನಾಂಕ 07/05/2016 ರಂದು ಸದರಿ ನೋಟೀಸಿಗೆ ಪ್ರತ್ಯುತ್ತರ ನೀಡಿದ್ದೇನೆ ಎಂದರೆ ಸರಿ. ಸದರಿ ನೋಟೀಸನ್ನು ಪಡೆದ ನಂತರ ವಾದಿಗಳ ವಿರುದ್ದ ನಾನು ಏನಾದರೂ ಕಾನೂನು ಕ್ರಮ ಜರುಗಿಸಿರುತ್ತೇನಾ ಎಂದರೆ ಸಾಕ್ಷಿ ನಾನು ರಿಪ್ಲೈ ನೋಟೀಸನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಯಾವ ರೀತಿ ವಾದಿಗಳ ವಿರುದ್ದ ಕಾನೂನಿನ ಕ್ರಮ ಗೈಗೊಂಡಿರುತ್ತೇನೆಂದು ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಿಪಿ-1 ರ ಒಪ್ಪಂದ ಕರಾರು ಪತ್ರವನ್ನು

ನಾನು ವಾದಿಗಳಿಗೆ ಬರೆದುಕೊಟ್ಟಿರುವುದರಿಂದಲೇ ನಾನು ಅಂತಹ ಯಾವುದೇ ಕಾನೂನಿನ ಕ್ರಮ ಕೈಗೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಜಮೀನುಗಳಲ್ಲಿ ವಿಭಾಗ ಪಡೆದುಕೊಂಡು ವಾದಿಗಳಿಗೆ ಕ್ರಯಪತ್ರ ಬರೆದುಕೊಡುವುದಾಗಿ ಆಶ್ವಾಸನೆ ನೀಡಿರುವುದರಿಂದಲೇ ನಾನು ಅವರ ವಿರುದ್ಧ ಯಾವುದೇ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ವಾದಿಗಳು ನನಗೆ ನೋಟೀಸು ನೀಡುವ ಪೂರ್ವದಲ್ಲಿ ಹಾಗೂ ನಂತರದಲ್ಲಿಯೂ ಸಹ ಹಲವಾರು ಬಾರಿ ಕ್ರಯಪತ್ರ ಬರೆದುಕೊಡುವುದಾಗಿ ಕೇಳಿದ್ದರು ಸಹ ನಾನು ಸ್ಪಂದಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಯಾರೆಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಕಿರಣ್ ರವರಿಗೆ ಒಪ್ಪಂದದ ಕರಾರು ಪತ್ರವನ್ನು ಮದ್ಯವ್ಯಸನಿಯಾಗಿದ್ದಾಗ ಮಾಡಿಸಿಕೊಂಡಿರುತ್ತಾರೆಂದು ಹೇಳಿದ್ದು ಪ್ರಸ್ತುತ ದಾವೆಯಲ್ಲೂ ಸಹ ವಾದಿಗಳು ಯಾರೆಂದು ಗೊತ್ತಿಲ್ಲವೆಂದು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಗಳಿಗೆ ಮೋಸ ಮಾಡುವ ಸಲುವಾಗಿ 2 ರಿಂದ 4 ನೇ ಪ್ರತಿವಾದಿಗಳಿಗೆ ದಿನಾಂಕ 18/02/2016 ರಂದು ನಾನು, ನನ್ನ ತಂದೆ ಮತ್ತು ನನ್ನ ಮಗನ ಪರವಾಗಿ ನಾನು ದಾವಾ ಆಸ್ತಿಗಳನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸಾಕ್ಷಿ ನಾವು ಕ್ರಯಪತ್ರವನ್ನು ಬರೆದುಕೊಟಿಟರುವುದು ನಿಜ, ಅದರೆ ವಾದಿಗಳಿಗೆ ಯಾವುದೇ ಮೋಸ

ಮಾಡಿಲ್ಲ ಎಂದು ನುಡಿಯುತ್ತಾರೆ. 2 ರಿಂದ 4 ನೇ ಪ್ರತಿವಾದಿಗಳಿಗೆ ದಾವಾ ಆಸ್ತಿಯನ್ನು 1 ಕೋಟಿ 25 ಲಕ್ಷದ 25 ಸಾವಿರ ರೂಗಳಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಮಾರಾಟ ಪ್ರಕ್ರಿಯೆಯನ್ನು ನನ್ನ ತಂದೆ ಮಾಡಿದ್ದು ನಾನು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ವಾದಿಗಳಿಗೆ ನಿಪಿ-1 ರಂತೆ ಒಪ್ಪಂದ ಕರಾರು ಬರೆದುಕೊಟ್ಟ ನಂತರ ಹೆಚ್ಚಿನ ಹಣದ ಆಸೆಗಾಗಿ 2 ರಿಂದ 4 ನೇ ಪ್ರತಿವಾದಿಗಳಿಗೆ ಕ್ರಯಪತ್ರವನ್ನು ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

ನನ್ನ ತಂದೆ ದಿನಾಂಕ 08/09/2014 ರಂದು ದಾವಾ ಸ್ವತ್ತಿಗೆ ಸಂಬಂದಪಟ್ಟಂತೆ ನನ್ನ ಹೆಸರಿಗೆ ನೊಂದಾಯಿತ ದಾನಪತ್ರ ಬರೆದಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ದಿನಾಂಕ 08/09/2014 ರ ದಾನಪತ್ರದ ದೃಡೀಕೃತ ನಕಲನ್ನು ತೋರಿಸಿ ಕೇಳಲಾಗಿ ಸಾಕ್ಷಿ ಅದನ್ನು ಒಪ್ಪಿರುತ್ತಾರೆ. ಸಾಕ್ಷಿ ಮುಂದುವರೆದು ಸದರಿ ದಾಖಲೆಯನ್ನು ನನ್ನ ತಂದೆ ನನಗೆ ಮೋಸ ಮಾಡಲು ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆದ್ದರಿಂದ ಸದರಿ ದಾನಪತ್ರದ ದೃಡೀಕೃತ ನಕಲನ್ನು ನಿಪಿ-10 ಎಂದು ಗುರುತಿಸಲಾಯಿತು. ದಿನಾಂಕ 10/07/2013 ರಂದು ನಿಪಿ-೧ ರಂತೆ ವಾದಿಗಳಿಗೆ ಒಪ್ಪಂದ ಕರಾರುಪತ್ರವನ್ನು ಬರೆದುಕೊಟ್ಟ ನಂತರದಲ್ಲಿ ಅದರಂತೆ ಕ್ರಯಪತ್ರ ಬರೆದುಕೊಡುವ ಸಲುವಾಗಿ ನನ್ನ ತಂದೆ

ದಿನಾಂಕ 08/09/2014 ರ ದಾನಪತ್ರ ವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ಸದರಿ ದಾನಪತ್ರದಲ್ಲಿರುವಂತಹ ಆಸ್ತಿಗೂ ದಾವಾ ಆಸ್ತಿಗೂ ಸಂಬಂದ ಇಲ್ಲ ಎಂದು ನುಡಿಯುತ್ತಾರೆ. ಸದರಿ ದಾನಪತ್ರದಲ್ಲಿ ನನ್ನ ತಂದೆಯ ಆಸ್ತಿಗೆ ಸಂಬಂದಪಟ್ಟಂತೆ ಉಲ್ಲೇಖ ಇರುತ್ತದೆ ಎಂದರೆ ಸಾಕ್ಷಿ ಸದರಿ ದಾಖಲೆಯಲ್ಲಿ ಒಟ್ಟು 4 ಲಾಟು ಸ್ವತ್ತು ಇದ್ದು, ಎರಡು ಸ್ವತ್ತುಗಳು ನನ್ನ ತಂದೆಗೆ ಸಂಬಂಧಿಸಿದ್ದು, ಉಳಿದ ಎರಡು ಲಾಟು ನನ್ನ ಅಜ್ಜಿಗೆ ಸಂಬಂದಪಟ್ಟದ್ದು ಎಂದು ನುಡಿಯುತ್ತಾರೆ. ಸದರಿ ದಾನಪತ್ರವನ್ನು ನನ್ನ ತಂದೆಗೆ ಸಂಬಂದಪಟ್ಟ ಎರಡು ಲಾಟುಗಳಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾನಪತ್ರವನ್ನು ಯಶೋಧಮ್ಮರವರು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಂದೆಗೆ ನನಗೆ ಬರೆದಿದ್ದಾರೆ ಎಂದು ನುಡಿಯುತ್ತಾರೆ. ವಾದಿಗಳು ಕ್ರಯದ ಕರಾರಿನಂತೆ ಪದೇ ಪದೇ ಕ್ರಯಪತ್ರ ಬರೆದುಕೊಡುವಂತೆ ಕೇಳಿಕೊಂಡಿದ್ದರೂ ಸಹ ನಾನು ಅವರಿಗೆ ಮೋಸ ಮಾಡಲು ಕ್ರಯಪತ್ರ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಮುದ್ರಾಂಕ ಶುಲ್ಕವನ್ನು ಉಳಿಸುವ ಉದ್ದೇಶದಿಂದ ನನ್ನ ತಂದೆ ನನ್ನ ಹೆಸರಿಗೆ ನಿಪಿ-10 ದಾನಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸುಳ್ಳು.

ದಿನಾಂಕ 10/07/2013 ರಂದು ಒಪ್ಪಂದ ಕರಾರು ಬರೆದುಕೊಡುವ ಸಮಯದಲ್ಲಿ ವಾದಿಗಳಿಂದ ನಾನು 34 ಲಕ್ಷ ರೂಗಳನ್ನು ಪಡೆದುಕೊಂಡಿರುತ್ತೇನೆ ಎಂದರೆ ಸುಳ್ಳು. ಹೆಚ್ಚಿನ ಮೊತ್ತವಾದ್ದರಿಂದ ವಾದಿಗಳಿಗೆ ನಿಪಿ-1 ರಂತೆ ಒಪ್ಪಂದ ಕರಾರುಪತ್ರವನ್ನು ನಾನು ಬರೆದುಕೊಟ್ಟು ಅದರಲ್ಲಿ ನನ್ನ ಹೆಬ್ಬೆಟ್ಟು ಗುರುತು ಮತ್ತು ಸಹಿ ಎರಡನ್ನು ಮಾಡಿರುತ್ತೇನೆ ಎಂದರೆ ಸುಳ್ಳು. ಸಾಕ್ಷಿದಾರರ ಸಮಕ್ಷಮದಲ್ಲಿ ನಾನು ಮತ್ತು ನನ್ನ ತಂದೆ 34 ಲಕ್ಷ ರೂಗಳನ್ನು ಪಡೆದುಕೊಂಡಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆ ಸಮಯದಲ್ಲಿ ಹಲವಾರು ಜನರ ಬಳಿ ಸಾಲ ಮಾಡಿ ಚೆಕ್ಕುಗಳನ್ನು ಕೊಟ್ಟಿದ್ದರಿಂದ 34 ಲಕ್ಷ ರೂಗಳನ್ನು ನಗದು ರೂಪದಲ್ಲಿ ಕೇಳಿ ಪಡೆದುಕೊಂಡಿರುತ್ತೇನೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ನಾನು ಯಾರಿಗೂ ಸಹ ಯಾವುದೇ ತರಹದ ಚೆಕ್ಕುಗಳನ್ನು ನೀಡಿರುವುದಿಲ್ಲ, ನನಗೆ ಹಣದ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. ನಿಪಿ-1 ರ ಒಪ್ಪಂದ ಕರಾರು ಆಗುವ ಸಮಯದಲ್ಲಿ ನಾನು ಕೆನರಾ ಬ್ಯಾಂಕ್ ಕಡೂರಿನಲ್ಲಿ ಖಾತೆ ಹೊಂದಿದ್ದೆ ಎಂದರೆ ಸಾಕ್ಷಿ ಖಾತೆ ಇತ್ತು ಯಾವುದೇ ವಹಿವಾಟು ಇಲ್ಲದೆ ಸದರಿ ಖಾತೆ ಸ್ತಬ್ಧಗೊಂಡಿತ್ತು ಎಂದು ನುಡಿಯುತ್ತಾರೆ. 2014 ರಲ್ಲಿ ಸದರಿ ಖಾತೆಯಲ್ಲಿ 1,67,216 ರೂಗಳು ಇದ್ದವು ಎಂದರೆ ಸುಳ್ಳು. ವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ಸದರಿ ಬ್ಯಾಂಕ್ ಖಾತೆ 2014 ರಲ್ಲಿ

ಸ್ವಾಧೀನ ಹೊಂದಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಂತೆ ಒಪ್ಪಂದ ಕರಾರುಪತ್ರವನ್ನು ಬರೆದುಕೊಟ್ಟಿದ್ದು ಸದರಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 2 ರಿಂದ 4 ನೇ ಪ್ರತಿವಾದಿಗಳಿಗೆ ಹೆಚ್ಚಿನ ಮೊತ್ತಕ್ಕೆ ಬರೆದುಕೊಟ್ಟಿರುವ ಕಾರಣ ನಿಪಿ-1 ರ ಕರಾರು ಪತ್ರವನ್ನು ಹಲ್ಲೆಗೆಳೆಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ರಿಂದ 4 ನೇ ಪ್ರತಿವಾದಿಗಳಿಗೆ ಕ್ರಯಪತ್ರ ಬರೆದುಕೊಡುವ ಪೂರ್ವದಲ್ಲಿ ನನ್ನ ತಂದೆ, ನಾನು ನನ್ನ ಮತ್ತು ನನ್ನ ಮಗನ ಪರವಾಗಿ ನೊಂದಾಯಿತ ಕರಾರುಪತ್ರವನ್ನು ದಿನಾಂಕ 09/07/2014 ರಂದು ಬರೆದುಕೊಟ್ಟಿರುತ್ತೇವೆ ಎಂದರೆ ಸರಿ. ಸಾಕ್ಷಿಗೆ ಮೂರು ನೊಂದಾಯಿತ ಕ್ರಯದ ಒಪ್ಪಂದ ಕರಾರು ಪತ್ರಗಳ ದೃಡೀಕೃತ ನಕಲುಗಳನ್ನು ತೋರಿಸಲಾಗಿ ಸಾಕ್ಷಿ ಅವುಗಳನ್ನು ಒಪ್ಪಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ-11 ರಿಂದ 13 ಎಂದು ಗುರುತಿಸಲಾಯಿತು. ದಿನಾಂಕ 10/07/2013 ರ ನಂತರದಲ್ಲಿ ಮೇಲ್ಕಂಡ ಕರಾರು ಪತ್ರಗಳನ್ನು ಮಾಡಿಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ದಿನಾಂಕ 10/07/2013 ರಂದು ನಾನು ಯಾವುದೇ ದಾಖಲೆ ಮಾಡಿಕೊಟ್ಟಿರುವುದಿಲ್ಲ ಹಾಗೂ ಮೇಲ್ಕಂಡ 2 ರಿಂದ 4 ನೇ ಪ್ರತಿವಾದಿಗಳಿಗೆ ಮಾಡಿಕೊಟ್ಟಿರುವ ಕರಾರುಪತ್ರಗಳ ದಿನಾಂಕ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ.

ಮುಂದುವರೆದು ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.